ಹಾಸನ ಡಿಸ್ಟ್ರಿಕ್ಟ್.

ತಾರೀಖು 15ನೇ ಜುಲೈ 1896.

ಇದರಿಂದ ಸರ್ವಸ್ತ ಜನಗಳಿಗೂ ತಿಳಿಯಪಡಿಸುವದೇನೆಂದರೆ,—ಸ್ಯ 1896—97ನೇ ಸಾಲಿಗೆ ಬೇಲೂರು ತಾಲ್ಲೂಕಿನಲ್ಲಿರುವ ಕುರಂಗದ ಕಲ್ಲು ಜಮಾಯಿಸತಕ್ಕ ಹಕ್ಕನ್ನ ಬೇಲೂರು ತಾಲ್ಲೂಕು ಕಚೇರಿಯಲ್ಲಿ ಬಳುವ ಆಗಸ್ಟ್ 31ನೇ ತಾರೀಖಿನ ಬೆಳ್ಗೆ 11 ಘಂಟೆಗೆ ಹರಾಜು ಮೂಲಕ ವಿಕ್ರಯಿಸಲ್ಪಡುತ್ತೆ.

2. ಅಮಲ್ದಾರ್ರು ಅಥವಾ ಶಿರಸ್ತೇದಾರ್ರು ಹರಾಜು ಮಾಡಿಸುತ್ತಾರೆ.

3. ಜಡಸವಾಲ್ ಅಂಗೀಕರಿಸತಕ್ಕದ್ದು ಹಾಸನ ಡಿಸ್ಟ್ರಿಕ್ಟ್ ಡೆಪ್ಯುಟಿ ಕಮ್ಮಿಷನರ್ ಸಾಹೇಬರವರ ಮಂಜೂರಾತಿಗೆ ವಳಪ ಟ್ಟಿರುತ್ತೆ.

4. ಹರಾಜ್ ಕಾಲದಲ್ಲಿ ಸವಾಲ್ ಮಾಡತಕ್ಕವರು ತಮ್ಮ ಸ್ವಂತಕ್ಕೋಸ್ಕರ ಸವಾಲ್ ಮಾಡುತ್ತಾರೋ ಅಥವಾ ಏಜಂಟರಾಗಿ ಸವಾಲ್ ಮಾಡುತ್ತಾರೋ ಆ ಸಂಗತಿಯನ್ನ ತಿಳಿಸಬೇಕು. ಏಜಂಟರಾಗಿ ಸವಾಲ್ ಮಾಡುವದಾದರೆ ತಾವು ಯಾರಿಗೋಸ್ಕರ ಸವಾಲ್ ಮಾಡುತ್ತಾರೋ ಅವರಿಂದ ಪಡದಿರುವ ಅಧಿಕಾರ ಪತ್ರಿಕೆಯನ್ನ ಹಾಜರ್ಮಾಡಬೇಕು. ಹಾಗೆ ಮಾಡಲು ತಪ್ಪಿದರೆ ಅವರ ಸವಾಲ್ ತಿರಸ್ಕರಿಸಲ್ಪಡುತ್ತೆ.

5. ಜಡಸವಾಲ್ದಾರ್ರು ಹರಾಜ್ ಕಾಲದಲ್ಲಿ ತಮ್ಮ ಸವಾಲ್ ಮೊಬಲಗು ಪೈಕಿ ಕೈಕಡಾ 25 ರೂಪಾಯಿ ಮೇರಿಗೆ ಡಿಪಾಜಿಟ್ ಮೊಬಲಗು ಹಾಜರ್ಮಾಡಬೇಕಲ್ಲದೆ ಹರಾಜ್ ಮಂಜೂರ್ಮಾಡಲ್ಪಟ್ಟ ಸಂಗತಿ ಅಮಲ್ದಾರ್ರಿಂದ ಜಡಸವಾಲ್ದಾರ್ರಿಗೆ ತಿಳಿಸಲ್ಪಟ್ಟ ತಾರೀಖು ಲಾಗಾಯತು 7 ದಿವಸಗಳೊಳಗಾಗಿ ಜಡ ಸವಾಲ್ ಮೊಬಲಗಿನ ಮೇಲೆ ರೂಪಾಯಿ ಬಂಪಕ್ಕೆ ಬಂದು ಆಣೆಯಂತೆ ಆಗು ವಲೋಕಲ್ ಸೆಸ್ಸ್ ದೇಖೀಲ್ ಜಡಸವಾಲ್ ಮೊಬಲಗನ್ನ ಪಾವತಿ ಮಾಡದಿದ್ದರೆ ಹಾಗೆ ಇಟ್ಟ ಡಿಪಾಜಿಟ್ ಮೊಬಲಗು ಸರಕಾರಕ್ಕೆ ದಂಡ ವಾಗಿ ತೆಗದುಕೊಳ್ಳಲ್ಪಡುವದು.

6. ಇಜಾರೆದಾರ್ರು ಹಿಡುವಳಿ ಜಮೀನುಗಳಲ್ಲಿ ಇರತಕ್ಕ ಕುರಂಗದ ಕಲ್ಲುಗಳನ್ನ ಆಯಾ ಹಿಡುವಳಿದಾರ್ರ ಅನುಮತಿ ವಿನಹ ಆರಿಸಿಕೊಳ್ಳಕೂಡದು. ಮತ್ತು ಹಿಡುವಳಿದಾರ್ರು ತಮ್ಮ ಜಮೀನುಗಳಲ್ಲಿರತಕ್ಕ ಕುರಂಗದ ಕಲ್ಲುಗಳನ್ನ ತಾವೇ ಆರಿಸಿಕೊಳ್ಳಕೂಡದು. ಅಥವಾ ಇಜಾರೇದಾರ್ರು ವಿನಹ ಇತರರಿಗೆ ಮಾರಲೂ ಕೂಡದು.

7. ಇಜಾರೆದಾರ್ರು ಹುಲ್ಲುಬನ್ನಿಯ ಯಾ ಹುಲ್ಲುಗಾವಲ್ ಇಜಾರೆದಾರ್ರ ಹಕ್ಕಿಗೆ ಆತಂಕ ಪಡಿಸಕೂಡದು.

8. ಹಿಡುವಳಿಯಲ್ಲಿ ಇಲ್ಲದ ಜಮೀನುಗಳನ್ನ ಸರಕಾರದವರು ಸಾಗುವಳಿಗೆ ಕೊಡತಕ್ಕ ವಿಷಯದಲ್ಲಿ ಇಜಾರೆದಾರ್ರ ಅಭ್ಯಂತರವೇನೂ ಇರುವದಿಲ್ಲ. ಪರಂತು ಅಂಥಾ ಜಮೀನುಗಳಲ್ಲಿ ಶಿಕ್ಕುವ ಕುರಂಗದ ಕಲ್ಲುಗಳನ್ನ ತೆಗದುಕೊಳ್ಳಲು ಅವರಿಗೆ ಹಕ್ಕು ಇರುತ್ತೆ.

9. ಕಲ್ಲುಗಳನ್ನ ಜಮಾಯಿಸುವದಕ್ಕಾಗಿ ಜಮೀನ್ಗಳನ್ನ ಇಜಾರೆದಾರ್ರು ಅಗಿಸುಕೂಡದು. ಬಂದು ವೇಳೆ ಆಗಿದರೂ ಸಾಗುವಳಿಗೆ ಅನುಕೂಲಿಸುವ ಹಾಗೆ ಗುಣಿಗಳನ್ನ ಮುಚ್ಚಿ ಸರಿಪಡಿಸಬೇಕು.

10. ಕಲ್ಲುಗಳು ಜಮಾಯಿಸಲ್ಪಟ್ಟ ಗ್ರಾಮ, ಇಷ್ಟು ಮಣ ಕಲ್ಲುಗಳು, ಮತ್ತು ಅದು ರಫ್ತಾಗತಕ್ಕ ಸ್ಥಳ. ಈ ತಫ್ಸೀಲ್ಗಳು ನಮೂದು ಕಂಡು ತಾಲ್ಲೂಕು ಅಮಲ್ದಾರ್ರಿಂದ ವಂದು ಮಾಫೀ ಲೈಸೆನ್ಸನ್ನು ಪಡೆಯದೆ ಕಲ್ಲುಗಳನ್ನ ಇಜಾರೆದಾರ್ರು ಸಾಗಿಸ ಕೂಡದು.

ಎ. ಕೃಷ್ಣಸ್ವಾಮಯ್ಯಂಗಾರ್,
ಡೆಪ್ಯುಟಿ ಕಮ್ಮಿಷನರ್.

ನಗರ ಡಿವಿಜ್ಞ ಡಿಸ್ಟ್ರಿಕ್ಟ್ ಜಡ್ಜಿಯವರ ಕೋರ್ಟಿನಲ್ಲಿ.

ಸ್ಯ 1896—97ನೇ ಇಸವಿ ಮಿಸಲೇನಿಯಸ್ ಅರ್ಜೀ ನಂಬರ್ 12.

ಮೃತಪಟ್ಟ ಜೇಕಬ್ ಡಿಕಾಸ್ಟ್ರಾ ಎಂಬುವರ ಆಸ್ತೀ ವಿಷಯದಲ್ಲಿ—

ಅರ್ಜೀದಾರ್ರು ಶಿವಮೊಗ್ಗದಲ್ಲಿರುವ ಮನುವೇಲು ಡಿಕಾಸ್ಟ್ರಾ ಬಿನ್ ಲೋರೆನ್ಸ್ ಡಿಕಾಸ್ಟ್ರಾ, ಮೃತಪಟ್ಟ ಸದರೀ ಜೇಕಬ್ ಡಿಕಾಸ್ಟ್ರಾ ಎಂಬುವರಿಗೆ ತಂದೆ ಆಗಬೇಕೆಂಬ ಹಕ್ಕುದಾರಿ ಮೇಲೆ ಶಿವಮೊಗ್ಗ ಜಿಲ್ಲೆಯ ಮನುವೇಲು ಡಿಕಾಸ್ಟ್ರಾ ಎಂಬುವರು, ಶಿವಮೊಗ್ಗ ವಾಸಸ್ಥರಾಗಿ ಮೃತಪಟ್ಟ ಜೇಕಬ್ ಡಿಕಾಸ್ಟ್ರಾ ಎಂಬುವರ ಜೀವಿತಕ್ಕೆ ಬರ್ತ್ಯಾಗಿ ಬರತಕ್ಕ 1,200 ರೂಪಾಯಿಗಳ ಸಾಲವನ್ನು ವಸೂಲ್ ಮಾಡುವದಕ್ಕೆ ಸ್ಯ 1860ನೇ ಇಸವಿ 27ನೇ ಆಕ್ಟ್ಯು ವೇರಿಗೆ ಸರ್ಟಿಫಿಕೇಟ್ ಬಗ್ಗೆ ಈ ಕೋರ್ಟಿಗೆ ಪ್ರಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ಮನುವೇಲು ಡಿಕಾಸ್ಟ್ರಾ ಎಂಬುವರ ಅರ್ಜಿಯನ್ನು ಸ್ಯ 1896ನೇ ಇಸವಿ ಆಗಸ್ಟ್ ತಿಂಗಳ ತಾರೀಖು 28ರಲ್ಲು ಕೇಳಿ ಸರ್ಟಿಫಿಕೇಟು ಪಡೆಯುತಕ್ಕ ಬಾಧ್ಯತೆಯನ್ನ ವಿನುರ್ಕ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಜೇಕಬ್ ಡಿಕಾಸ್ಟ್ರಾ ಎಂಬುವರ ಆಸ್ತಿಗೆ ಹಕ್ಕುದಾರರಾದ ವಿಸಸ್ಥರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

ಸ್ 1896—97ನೇ ಇಸವಿ ವಿಸಲೇನಿಯಸ್ ಅರ್ಜಿ ನಂಬ್ರ 15.

ಮೃತಪಟ್ಟ ಸಂತೇಗವುಡರ ಆಸ್ತಿ ವಿಷಯದಲ್ಲಿ—

ಅರ್ಜೀದಾರು) ಚಿಕ್ಕಮಗಳೂರು ತಾಲ್ಲೂಕು ಮಾಗಡಿ ವಾಸಿಗಳಾದ 1ನೇ ಕದರೇಗವುಡ ಬಿನ್ ಸಂತೇಗವುಡ, 2ನೇ ನರಸೇಗವುಡ ಬಿನ್ ದಾಸೇಗವುಡ, ಮೃತಪಟ್ಟ ಸದರೀ ಸಂತೇಗವುತರಿಗೆ 1ನೇ ಯವನು ಮಗ 2ನೇ ಯವನು ಅಂಣ ಆಗಬೇಕೆಂಬ ಹಕ್ಕುದಾರಿ ಮೇಲೆ ಸದರೀ ಮಾಗಡಿ ಸ್ಥಳದ 1ನೇ ಕದರೇಗವುಡ, 2ನೇ ನರಸೇಗವುಡ ಎಂಬುವರು, ಸದರೀ ಮಾಗಡಿ ವಾಸಸ್ಥರಾಗಿ ಮೃತಪಟ್ಟ ಸಂತೇಗವುತರ ಜಿಂದಗಿ ಬಗ್ಯಾಗಿ ಬರತಕ್ಕ 3,000 ರೂಪಾಯಿ ಸೂಲವನ್ನು ವಸೂಲ್ ಮಾತುವದಕ್ಕೆ ಸ್ 1860ನೇ ಇಸವಿ 27ನೇ ಆಕ್ಟು ಮೇರಿಗೆ ಸರಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ 1ನೇ ಕದರೇಗವುಡ, 2ನೇ ನರಸೇಗವುಡ, ಎಂಬುವರ ಅರ್ಜಿಯನ್ನು ಸ್ 1896ನೇ ಇಸವಿ ಆಗಸ್ಟು ತಿಂಗಳ ತಾರೀಖು 28ರಲ್ಲು ಕೇಳಿ ಸರಟಿಫಿಕೇಟ್ ಪಡೆಸುತಕ್ಕ ಬಾಧ್ಯತೆಯುನ್ನು ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಸಂತೇಗವುಡರ ಆಸ್ತಿಗೆ ಹಕ್ಕುದಾರರಾದ ವಿಶಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

ಸ್ 1896ನೇ ಇಸವಿ ಜುಲೈ ತಿಂಗಳ 13ನೇ ತಾರೀಖಿನಲ್ಲಿ ಕೋರ್ಟ್ ಮೊಹರ್‌ನು ನನ್ನ ದಸ್ತಖತ್ತೊಡನೆ ಕೊಡೋಣಾಗಿದೆ.

ಬಿ. ತಿರುಮಲಾಚಾರ್,
ಡಿಸ್ಟ್ರಿಕ್ಟ್ ಜಡ್ಜ್.

Mysore Govt. Central Press, Bangalore.—1896.